ರಾಜ್ಯದಲ್ಲಿ ವಿದ್ಯುತ್ ಮಿತ ಬಳಕೆಯ ಬಗ್ಗೆ

೩೦೯. ಶ್ರೀ ಬಿ. ಎ. ಉಮರಬ್ಬ (ವಿಟ್ಲ).— ಮಾನ್ಯ ವಿದ್ಯುತ್‌ಚ್ಛಕ್ತಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯವು ತೀವ್ರ ವಿದ್ಯುತ್ ಅಭಾವ ಅನುಭವಿಸುತ್ತಿರುವಾಗ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ವಿದ್ಯುತ್ ಮಿತ ಬಳಕೆಯ ಬಗೆಗೆ ತೆಗೆದುಕೊಂಡ ಕ್ರಮಗಳೇನು ?

ಆ) ಈ ಕ್ರಮಗಳನ್ನು ಸಾರ್ವಜನಿಕರಿಗೆ ಮನದಟ್ಟು ಮಾಡಲು ಕೈಗೊಂಡ ಕಾರ್ಯ ಕ್ರಮಗಳೇನು ?

ಶ್ರೀ ಜೆ. ಎಸ್. ದೇಶ್‌ಪಾಂಡೆ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ೧) ವಿದ್ಯುತ್ ಬಳಕೆಯನ್ನು ಮಿತವಾಗಿ ಉಪಯೋಗಿಸಲು ಗ್ರಾಹಕರನ್ನು ವೃತ್ತ ಪತ್ರಿಕೆಗಳು ಮತ್ತು ದೂರದರ್ಶನ ಮುಂತಾದವುಗಳ ಮೂಲಕ ವಿನಂತಿಸಲಾಗಿದೆ.

೨) ವಿದ್ಯುತ್ ಬಳಕೆಯನ್ನು ಕಡಿಮೆಗೊಳಿಸುವ ಸಲುವಾಗಿ ಗ್ರಾಹಕರ ಬಳಕೆ ಮೇಲೆ (ಅವಶ್ಯ ಸೇವೆಗಳಾದ ಆಸ್ಪತ್ರೆ, ನೀರಾವರಿ ಸ್ಥಾವರಗಳು ಮುಂತಾದವುಗಳು ಈ ವಿದ್ಯುತ್ ಕಡಿತಕ್ಕೆ ಹೊರತಾಗಿವೆ) ಶೇ. ೨೫ ರಿಂದ ಶೇ. ೭೦ ರಷ್ಟು ವಿದ್ಯುತ್ ಕಡಿತವನ್ನು ೧-೧೦-೮೫ ರಿಂದ ವಿಧಿಸಲಾಗಿದೆ.

೩) ಸಾಧ್ಯವಾದ ಕಡೆಗಳಲ್ಲೆಲ್ಲಾ ಲೋಡ್ ಷೆಡಿಂಗನ್ನು ಸಹಾ ಮಾಡಲಾಗುತ್ತಿದೆ.

೪) ಸರ್ಕಾರ ಎಲ್ಲಾ ಇಲಾಖೆಗಳಿಗೂ ಸುತ್ತೋಲೆಗಳನ್ನು ಕಳುಹಿಸಿ ವಿದ್ಯುತ್ತನ್ನು ಮಿತ ವ್ಯಯವಾಗಿ ಉಪಯೋಗಿಸುವಂತೆ ತಿಳಿಸಲಾಗಿದೆ.

ಆ) ರಾಜ್ಯ ಎದುರಿಸುತ್ತಿರುವ ವಿದ್ಯುತ್ ಕೊರತೆಯ ಬಗ್ಗೆ ರಾಜ್ಯದ ವಿದ್ಯುತ್ ಗ್ರಾಹಕರಿಗೆ ಕನ್ನಡ ಮತ್ತು ಆಂಗ್ಲ ದಿನಪತ್ರಿಕೆಗಳ ಮೂಲಕ ಕಾರಣಗಳನ್ನು ವಿವರಿಸಿ ವಿದ್ಯುತ್ ಬಳಕೆಯಲ್ಲಿ ಮಿತ ಬಳಕೆ ಮಾಡಲು ಮನವಿ ಮಾಡಿ ಅವರ ಸಹಕಾರವನ್ನು ಕೋರಲಾಗಿದೆ.

ರೈತರ ವಿದ್ಯುತ್ ಪಂಪುಸೆಟ್ಟುಗಳಿಗೆ ಹೆಚ್ಚು ಪ್ರಮಾಣದ ವಿದ್ಯುತ್ ಪೂರೈಕೆ

೩೦೩. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).— ಮಾನ್ಯ ವಿದ್ಯುತ್ ಹಾಗೂ ಗಣಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೋಣ ತಾಲ್ಲೂಕು ಗಜೇಂದ್ರಗಡ ಭಾಗದಲ್ಲಿ ಕಡಿಮೆ ಪ್ರಮಾಣದ ವಿದ್ಯುತ್ ವೋಲ್ಟೇಜ್ ಇರುವುದರಿಂದ ರೈತರ ಪಂಪುಸೆಟ್ಟುಗಳು ಸುಟ್ಟು ಹೋಗುತ್ತಿರುವುದು ನಿಜವೇ ?

ಆ) ಈ ಬಗ್ಗೆ ಸರ್ಕಾರದವರಿಗೆ ದೂರುಗಳು ಏನಾದರೂ ಬಂದಿರುವುದೆ ?

ಇ) ಹಾಗಿದ್ದಲ್ಲಿ ವಿದ್ಯುತ್ ವೋಲ್ಟೇಜ್ ಅನ್ನು ಹೆಚ್ಚಿಸುವಲ್ಲಿ ಸರ್ಕಾರದವರು ಕೈಗೊಂಡ ತುರ್ತು ಕ್ರಮಗಳೇನು ?

ಶ್ರೀ ಜೆ. ಎಸ್. ದೇಶ್‌ಪಾಂಡೆ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ಗಜೇಂದ್ರಗಡ ಭಾಗದಲ್ಲಿ ಕಡಿಮೆ ವೋಲ್ಟೇಜ್ ಇರುವುದು ನಿಜ. ಆದರೆ ಇದರಿಂದಾಗಿ ಪಂಪುಸೆಟ್ಟುಗಳು ಸುಟ್ಟಿರುವುದು ಮಂಡಳಿಯ ಗಮನಕ್ಕೆ ಬಂದಿಲ್ಲ.

ಆ) ಕಡಿಮೆ ವೋಲ್ಟೇಜ್ ಬಗ್ಗೆ ಮಂಡಳಿಗೆ ದೂರುಗಳು ಬಂದಿವೆ,

ಇ) ವೋಲ್ಟೇಜನ್ನು ಉತ್ತಮ ಪಡಿಸಲು ಮಂಡಳಿಯು ಕೈಗೊಂಡ ತುರ್ತು ಕ್ರಮಗಳು ಈ ರೀತಿ ಇವೆ.

೧) ಗಜೇಂದ್ರಗಡದಲ್ಲಿ ಈಗಾಗಲೇ ಒಂದು ೧೧ ಕೆ. ವಿ. ೬೦ ಕೆ.ವಿ.ಎ.ಆರ್. ಕೆಪಾಸಿಟರ್ ಸ್ಥಾಪಿಸಲಾಗಿದೆ.